ಕರ್ನಾಟಕ ವಿಧಾನಸಭೆ

ಶುಕ್ರವಾರ 22ನೇ ಆಗಸ್ಟ್ 1997ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ: ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

(ಪ್ರಶ್ನೋತ್ತರಗಳು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ: ಕೊಡಗು ಜಿಲ್ಲೆಯಲ್ಲಿ ಭತ್ತದ ಬೆಳೆಗೆ ಬೆಂಕಿ ರೋಗ

496 (3554)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಬೆಂಕಿ ರೋಗದಿಂದ ಭತ್ತದ ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರ ಪರಿಹಾರಕ್ಕಾಗಿ ಜಿಲ್ಲಾ ಆಡಳಿತ ಕಛೇರಿಯಿಂದ ಎಷ್ಟು ಪರಿಹಾರ ಧನವನ್ನು ಕೇಳಲಾಗಿತ್ತು? ಹಾಗೂ ಬಿಡುಗಡೆ ಮಾಡಿದ ಪರಿಹಾರ ಧನ ಎಷ್ಟು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) ಬಂದಿರುತ್ತದೆ.

ಆ) ಪರಿಹಾರ ನೀಡುವ ವಿಷಯವು ಕೃಷಿ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲಾ. ಆದರೂ ಸಹ ಕೃಷಿ ಇಲಾಖೆಯ 27.00 ಲಕ್ಷ ರೂಗಳ ಮೌಲ್ಯದ ಆರ್ಥಿಕ ನಷ್ಟದ ಅಂದಾಜು ಪಟ್ಟಿಯನ್ನು ತಯಾರಿಸಿ ಅದನ್ನು ಕೊಡಗು ಜಿಲ್ಲಾ ಪಂಚಾಯತಿಗೆ ಕಳುಹಿಸಿತ್ತು. ಹಾನಿಗೊಳಗಾದ ರೈತರಿಗೆ ರಿಯಾಯತಿ ದರದಲ್ಲಿ ಸಸ್ಯ ಸಂರಕ್ಷಣಾ ರಸಾಯನಗಳನ್ನು ಒದಗಿಸಲು ಜಿಲ್ಲಾ ಪಂಚಾಯಿತಿಯು 1.50 ಲಕ್ಷ ರೂಗಳನ್ನು ಬಿಡುಗಡೆ ಮಾಡಿದ್ದು ಇದರಲ್ಲಿ ರೈತರಿಗೆ ಸಸ್ಯ ಸಂರಕ್ಷಣಾ ರಸಾಯನಿಕಗಳನ್ನು ವಿತರಿಸಲಾಗಿದೆ. ಆದರೆ, ಪರಿಹಾರ ನೀಡುವ ವಿಷಯವು ಕೃಷಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲಾ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: 1996-97ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಬೆಂಕಿ ರೋಗದಿಂದ ಭತ್ತದ ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಉತ್ತರದಲ್ಲಿ ಬಂದಿರುವುದಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ಪರಿಹಾರ ಕೊಡಲಾಗಿದೆಯೇ ಎಂದು ಕೇಳಿದ್ದಕ್ಕೆ 27 ಲಕ್ಷ ರೂಪಾಯಿಗಳ ಮೌಲ್ಯದ ಆರ್ಥಿಕ ನಷ್ಟದ ಅಂದಾಜು ಪಟ್ಟಿಯನ್ನು ತಯಾರಿಸಿ ಅದನ್ನು ಕೊಡಗು ಜಿಲ್ಲಾ ಪಂಚಾಯತಿಗೆ ಕಳುಹಿಸಿಕೊಡಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಕಳೆದ ಸಾರಿ ನಾನು ಇದೇ ಸದನದಲ್ಲಿ ಬೆಂಕಿ ರೋಗ ಬಂದಿದೆ, ನಮ್ಮ ಅಂಕನಹಳ್ಳಿ, ಆಲೂರು ಸಿದ್ಧಾಪುರ ಗ್ರಾಮಗಳ ಭಾಗದಲ್ಲಿ ಬೆಳೆ ನಾಶ ಆಗಿದೆ ಎಂದು ಸದನದಲ್ಲಿಯೇ ಪ್ರಶ್ನೆ ಕೇಳಿದ್ದೇನೆ. ಆದರೆ ಸರ್ಕಾರ ಅದರ ಬಗ್ಗೆ ಗಮನಕ್ಕೆ ಬಂದಿಲ್ಲ ಎಂದು ಹೇಳುವ ಉತ್ತರ ಬಹಳ ಶೋಚನೀಯವಾಗಿದೆ. ಮತ್ತು ಈ ಬೆಂಕಿ ರೋಗವನ್ನು ತಡೆಗಟ್ಟಲು ಏನಾದರೂ ಪರಿಹಾರವನ್ನು ಕಂಡುಹಿಡಿದಿದ್ದಾರಾ ಎಂದು ನಾನು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಂಸಿ.ನಾಣಯ್ಯ: (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೇ, ಪ್ರಶ್ನೆ ಏನು ಅಂದರೆ 1996-97ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಬೆಂಕಿ ರೋಗದಿಂದ ಭತ್ತದ ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಬಂದಿರುತ್ತದೆ ಎಂದು ಹೇಳಿದ್ದೇವೆ, ಬಂದಿಲ್ಲ ಎಂದು ಹೇಳಿಲ್ಲ. ನಿಜ 1996-97ನೇ ಸಾಲಿನಲ್ಲಿ ಬೆಂಕಿ ರೋಗ ಬಂದಿದೆ. ಸುಮಾರು 108 ಹೆಕ್ಟೇರ್ ಜಮೀನು ಒಟ್ಟು ಬೆಂಕಿ ರೋಗಕ್ಕೆ ತುತ್ತಾಗಿರತಕ್ಕದ್ದು. 27 ಲಕ್ಷ ರೂಪಾಯಿಗಳಷ್ಟು ಹಾನಿ ಆಗಿರತಕ್ಕದ್ದು. ಇದರಲ್ಲಿ ತೊಂದರೆಗೆ ಒಳಗಾಗಿರತಕ್ಕಂಥ ನಮ್ಮ ಕೃಷಿಕರು 849. ಆದರೆ, ಪರಿಹಾರ ಕೊಡಲಿಕ್ಕೆ ಇರತಕ್ಕದ್ದಕ್ಕೆ ಕೃಷಿ ಇಲಾಖೆಯಲ್ಲಿ ಈಗ ಯಾವುದೇ ಕಾರ್ಯಕ್ರಮಗಳು ಇಲ್ಲ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಕ್ರಾಪ್ ಇನ್‌ಶ್ಯೂರೆನ್ಸ್ ಎಂದು ಹೇಳತಕ್ಕದ್ದು ಒಂದು ಇದೆ. ಆದರೆ, ಕ್ರಾಪ್ ಇನ್‌ಶ್ಯೂರೆನ್ಸ್ ಎಂದು ಹೇಳತಕ್ಕದ್ದು ಒಂದು ತಾಲ್ಲೂಕು ಮಟ್ಟವನ್ನೇ ಬೇಸ್ ಆಗಿ ತೆಗೆದುಕೊಂಡಿರುವುದರಿಂದ ಎಲ್ಲಿ ತೊಂದರೆಗೆ ಒಳಗಾಗಿದ್ದಾರೆ ಅವರಿಗೆ ಸಿಗಲಿಕ್ಕೆ ಇರತಕ್ಕದ್ದಕ್ಕೆ ಇವತ್ತಿನ ಆ ನಿಯಮಗಳಲ್ಲಿ ಕಾರ್ಯಕ್ರಮಗಳು ಇಲ್ಲ. ಆದ್ದರಿಂದ ಇವತ್ತು ಕೇಂದ್ರ ಸರ್ಕಾರಕ್ಕೆ ವಿಮಾ ಯೋಜನೆಯನ್ನು ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡಿ ಹೋಬಳಿ ಮಟ್ಟದಲ್ಲಿ ಈ ಒಂದು ವಿಮೆ ಕಾರ್ಯಕ್ರಮವನ್ನು ಕೈಗೊಳ್ಳುವ ಹಾಗೆ ಪತ್ರವನ್ನು ಬರೆದಿದ್ದೇವೆ. ಜಿಲ್ಲಾ ಪಂಚಾಯತ್ ವತಿಯಿಂದ ಒಂದೂವರೆ ಲಕ್ಷ ರೂಪಾಯಿಗಳನ್ನು ಆ ರಸಾಯನಗಳನ್ನು ಖರೀದಿ ಮಾಡಲಿಕ್ಕೋಸ್ಕರ ನಾವು ಸಬ್ಸಿಡಿ ರೂಪದಲ್ಲಿ ಕೊಟ್ಟಿದ್ದೇವೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿದ್ದುದು ಬೆಂಕಿ ರೋಗಕ್ಕೆ ಏನಾದರೂ ಪರಿಹಾರ ಕಂಡುಹಿಡಿದಿದ್ದಾರೆಯೇ, ಆ ರೋಗಕ್ಕೆ ಏನಾದರೂ ಔಷಧಿ ಕಂಡು ಹಿಡಿದಿದ್ದಾರೆಯೇ ಮತ್ತೆ ಸೀಡ್ ಕಾರ್ಪೊರೇಷನ್‌ನಿಂದ ಸಪ್ಲೈ

ಮಾಡಿದ್ದಾರೆ, ಆ ಭತ್ತಕ್ಕೆ ಹೆಚ್ಚು ಬೆಂಕಿ ರೋಗ ತಗುಲಿರುವಂತಹದ್ದು ಆಗಿದೆ, ಇದಕ್ಕೆ ಕಾರಣವೇನು?

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೆ, ಈಗ ಸೀಡ್ ಕಾರ್ಪೋರೇಷನ್‌ನಿಂದ ತೆಗೆದುಕೊಂಡು ಹೋಗಿರತಕ್ಕ ಈ ಸೀಡ್‌ನಲ್ಲಿ ಇದು ನಡೆದಿದೆ ಎಂದು ತಾವು ಹೇಳಿದ್ದೀರಿ. ಬಹುಶಃ ಅದರ ಬಗ್ಗೆ ತಾವು ಈಗ ಗಮನ ಸೆಳೆದಿದ್ದೀರಿ. ಅದರ ಬಗ್ಗೆ ವಿಚಾರ ಮಾಡುತ್ತೇವೆ. ಆದರೆ ರಸಾಯನಗಳನ್ನು ಸಿಂಪಡಿಸಲಿಕ್ಕೆ ಇರತಕ್ಕದ್ದಕ್ಕೆ ನಾವೊಂದು ಕಾರ್ಯಕ್ರಮವನ್ನು ಹಾಕಿದ್ದೇವೆ. ಬೆಂಕಿ ರೋಗ ಎಂದು ಹೇಳುತ್ತಿರತಕ್ಕದ್ದು, ಸಂಪೂರ್ಣವಾಗಿ ಅದನ್ನು ನಾಶ ಮಾಡುವ ಬಗ್ಗೆ ಪ್ರಿವೆಂಟೀವ್ ಮೆಜರ್ಸ್ ಇಲ್ಲ. ರೋಗ ಬಂದಾದ ಮೇಲೆ ಅದನ್ನು ಯಾವ ರೀತಿ ಸ್ವಲ್ಪ ತಡೆಗಟ್ಟಲಿಕ್ಕೆ ಇರತಕ್ಕ ಕಾರ್ಯಕ್ರಮವನ್ನು ನಾವು ಕೈಗೊಳ್ಳುತ್ತಿದ್ದೇವೆ.

ಅಧ್ಯಕ್ಷರು:- ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ ಪ್ರಶ್ನೆಯನ್ನು ರಾಮಸ್ವಾಮಿಯವರು ಕೇಳಬೇಕು.

ಶ್ರೀ ಎ.ಟಿ.ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ನಾನು 4029ನೇ ಪ್ರಶ್ನೆಯನ್ನು ಮಾನ್ಯ ಮುಜರಾಯಿ ಸಚಿವರಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು:- ಮಹೇಶ್ ಚಂದ್ ಅವರು ಇಲ್ಲ. ನಾನು ಮೂರನೆಯ ಪ್ರಶ್ನೆಗೆ ಹೋಗಿದ್ದೇನೆ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ ಪ್ರಶ್ನೆಯನ್ನು ಮಾನ್ಯ ರಾಮಸ್ವಾಮಿಯವರು ಕೇಳಿದ್ದಾರೆ. ಮುಜರಾಯಿ ಸಚಿವರ ಮಗಳ ಮದುವೆ ಇತ್ತಲ್ಲ, ಅದರಿಂದ ಯಾರಿಗೆ ಉತ್ತರ ಹೇಳಲು ಆಥರೈಸ್ ಮಾಡಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ: ಆ ಪ್ರಶ್ನೆಯನ್ನು ನಂತರ ತೆಗೆದುಕೊಳ್ಳೋಣ.

ವಿಷಯ: ಚಿಕ್ಕಪೇಟೆ ಕ್ಷೇತ್ರದಲ್ಲಿ ಕೊಳಚೆ ಪ್ರದೇಶಗಳು.

499 (3044)

ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಪೇಟೆ ಕ್ಷೇತ್ರದಲ್ಲಿರುವ ಕೊಳಗೇರಿಗಳ ಸಂಖ್ಯೆ ಎಷ್ಟು ಹಾಗೂ ಅಲ್ಲಿ ವಾಸಿಸುವ ಜನತೆಯ ಸಂಖ್ಯೆ ಎಷ್ಟು?

ಆ) ಕೊಳಚೆ ನಿರ್ಮೂಲನಾ ಮಂಡಳಿಯವರು ಈ ಕ್ಷೇತ್ರದ ಕೊಳಗೇರಿಗಳನ್ನು ಅಭಿವೃದ್ಧಿಪಡಿಸಲು ಕಳೆದ ಮೂರು ವರ್ಷಗಳಿಂದ ಕೈಗೊಂಡ ಕ್ರಮ ಏನು?